

ಕನ್ನಡ
ದಿನೇ ದಿನೇ
ಕನ್ನಡಿಗರ ಮನಸ್ಸಿಗೆ
ಹತ್ತಿರವಾಗಿ, ಕರ್ನಾಟಕದ
ನಂಬರ್ 1 ಚಾನಲ್ ಆಗುವತ್ತ
ಮುನ್ನುಗ್ಗುತಿರುವ ಜ಼ೀ ಕನ್ನಡ
ವಾಹಿನಿಯು, ಫಿಕ್ಷನ್ ವಿಭಾಗದಲ್ಲಿ
ನಾಗಿಣಿ, ಗಂಗಾ, ಬ್ರಹ್ಮಗಂಟು, ಜೋಡಿಹಕ್ಕಿ,
ಪತ್ತೆದಾರಿ ಪ್ರತಿಭಾ, ಸುಬ್ಬಲಕ್ಷ್ಮಿ ಸಂಸಾರ ಕಾರ್ಯಕ್ರಮಗಳ
ಅಭೂತಪೂರ್ವ ಯಶಸ್ಸಿನ ನಂತರ, ನಿಗೂಢ ರಾತ್ರಿ ಎಂಬ ರೋಮಾಂಚಕ
ಥ್ರಿಲ್ಲರ್ ಧಾರಾವಾಹಿಯನ್ನು ಆರಂಭಿಸುವುದರೊಂದಿಗೆ ಹೊಸ
ಬಗೆಯ ಮನರಂಜನೆಯ ಸಾಧನೆಗೆ ಮುನ್ನುಡಿ
ಬರೆಯಲು ಸಿದ್ಧವಾಗಿದೆ.
ಮಲೆನಾಡಿನ ಸುಂದರ ಹಳ್ಳಿಯ
ಶ್ರೀಮಂತ ವ್ಯಕ್ತಿ ಸೂರ್ಯ
ನಾರಾಯಣನ ಮನೆಯಲ್ಲಿ
ಸರಣಿಯಾಗಿ ನಡೆಯುವ ವಿಚಿತ್ರ
ಘಟನೆಗಳ ಕಥೆಯೇ ನಿಗೂಢ ರಾತ್ರಿ.
ಸೂರ್ಯ ನಾರಾಯಣ ಮತ್ತು ಅವನ ಆರು
ಮಕ್ಕಳಿರುವ ಮನೆಯಲ್ಲಿ ಸರಮಾಲೆಯಂತೆ
ಒಂದರ ಮೇಲೊಂದು ಅನುಮಾನಾಸ್ಪದ
ಘಟನೆಗಳು ನಡೆಯುತ್ತವೆ. ಮನೆಯ ಹಿರಿಯ
ಸೂರ್ಯ ನಾರಾಯಣನ ಅನಿರೀಕ್ಷಿತ ಸಾವು,
ಮತ್ತಷ್ಟು ಆತಂಕವನ್ನು ಸೃಷ್ಟಿ
ಮಾಡುತ್ತದೆ. ಮನೆಯ ಸುತ್ತಲು
ಸುತ್ತುತಿದ್ದ ಪ್ರೇತಾತ್ಮವೇ ಸೂರ್ಯ
ನಾರಾಯಣನನ್ನು ಬಲಿ ತೆಗೆದುಕೊಂಡಿದೆ ಎಂದೇ ನಂಬುವ
ಮನೆಯವರು, ಈ ಎಲ್ಲಾ ಸಮಸ್ಯೆಗಳಿಂದ ಹೇಗೆ ಪಾರಾಗುತ್ತಾರೆ
ಮತ್ತು ನಡೆಯುತ್ತಿರುವ ಕಲ್ಪನೆಗೂ ನಿಲುಕದ ಭಯಾನಕ
ಚಟುವಟಿಕೆಗಳನ್ನು ಹೇಗೆ ತಡೆಯುತ್ತಾರೆ ಎಂಬ ಕುತೂಹಲಕಾರಿ
ಚಿತ್ರಕಥೆಯೊಂದಿಗೆ ಈ ಧಾರಾವಾಹಿ ಮೂಡಿ ಬರಲಿದೆ.
ಇದೇ ಪ್ರಥಮ ಬಾರಿಗೆ
ಕನ್ನಡ ಕಿರುತೆರೆಯಲ್ಲಿ
ಥ್ರಿಲ್ಲರ್ ಧಾರಾವಾಹಿಯೊಂದು
ಪ್ರತಿನಿತ್ಯ ಪ್ರಸಾರಗೊಳ್ಳಲಿದ್ದು
ಥ್ರಿಲ್ಲರ್ ಆಯಾಮದಲ್ಲಿ
ಹೊಸಟ್ರೆಂಡ್ ಸೃಷ್ಟಿ ಮಾಡಲಿದೆ
ಎಂಬುದು ಜ಼ೀ ಕನ್ನಡ ವಾಹಿನಿಯ ದೃಢ ನಂಬಿಕೆ.
ನಿಗೂಢ ರಾತ್ರಿ ಧಾರಾವಾಹಿಯನ್ನು ಜೋನಿ ಫಿಲ್ಮ್ಸ್ ಸಂಸ್ಥೆ
ನಿರ್ಮಿಸುತ್ತಿದ್ದು ಕಿರುತೆರೆಯ ಮತ್ತು ರಂಗಭೂಮಿಯ
ಹಲವಾರು ಹೆಸರಾಂತ ಕಲಾವಿದರು ಹಾಗು
ತಂತ್ರಜ್ಞರು ಈ ಧಾರಾವಾಹಿಯಲ್ಲಿ
ಕೆಲಸ ಮಾಡುತ್ತಿದ್ದಾರೆ.
ಈಗಾಗಲೇ ಹಲವು ಹಾಸ್ಯ
ಧಾರಾವಾಹಿಗಳನ್ನು
ನಿರ್ದೇಶಿಸಿ ಈಗ ಜ಼ೀ ಕನ್ನಡ
ವಾಹಿನಿಯ ಡ್ರಾಮಾ ಜೂನಿಯರ್ಸ್
ಮತ್ತು ಕಾಮಿಡಿ ಕಿಲಾಡಿಗಳು
ಕಾರ್ಯಕ್ರಮಗಳ ಮೂಲಕ ಕರ್ನಾಟಕದ
ಮನೆ ಮಗನಂತಾಗಿರುವನಗೆಮಾಸ್ಟರ್,
ಶ್ರೀ ಮಾಸ್ಟರ್ ಆನಂದ್ ಮೊದಲನೆ ಬಾರಿ ಥ್ರಿಲ್ಲರ್
ಧಾರಾವಾಹಿಯ ನಿರ್ದೇಶನವನ್ನು ಸವಾಲಾಗಿ
ತೆಗೆದುಕೊಂಡಿದ್ದಾರೆ.
ನಿಗೂಢರಾತ್ರಿ
ಜುಲೈ 17 ರಿಂದ
ಸೋಮ-ಶುಕ್ರ ರಾತ್ರಿ 10.30ಕ್ಕೆ
ವಿನೂತನ ಪ್ರೊಮೊಗಳ ಮೂಲಕ
ಈಗಾಗಲೇ ಪ್ರೇಕ್ಷಕರ ನಿರೀಕ್ಷೆ
ಹೆಚ್ಚಿಸಿರುವ 'ನಿಗೂಢರಾತ್ರಿ' ಧಾರಾವಾಹಿ
ಇದೇ ಜುಲೈ 17 ರಿಂದ
ಸೋಮ-ಶುಕ್ರ ರಾತ್ರಿ 10.30ಕ್ಕೆ ನಿಮ್ಮ ನೆಚ್ಚಿನ
ಜ಼ೀ ಕನ್ನಡ ವಾಹಿನಿಯಲ್ಲಿ ಪ್ರಸಾರ ಆರಂಭಿಸಲಿದೆ.